# 12. ಸ.ಹಿ.ಪ್ರಾ. ಶಾಲೆ ಸಮಟಗಾರು, ಹೊಸನಗರ ತಾ.

## 1. ಶಾಲೆಯ ಹಿನ್ನೆಲೆ :

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಐತಿಹಾಸಿಕ ಕ್ಷೇತ್ರ, ಹೊಂಬುಜದಿಂದ 3 ಕಿ.ಮೀ ದೂರದಲ್ಲಿರುವ ಪುಟ್ಟ ಶಾಲೆ ಸ.ಹಿ.ಪ್ರಾ ಶಾಲೆ, ಸಮಟಗಾರು. 1970 ರಲ್ಲಿ ಸ್ಥಾಪನೆಯಾದ ಈ ಶಾಲೆ ನಗರ ಪ್ರದೇಶದಿಂದ ದೂರದಲ್ಲಿದ್ದು, ಮೂಲ ಸೌಕರ್ಯಗಳು ಹಾಗೂ ಆಧುನಿಕತೆಯ ಸ್ಪರ್ಶದಿಂದ ಹೊರತಾಗಿದೆ. ಬಹುತೇಕ ಹಿಂದುಳಿದ ವರ್ಗಗಳಿಂದ ಬರುವ ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದು ಆರ್ಥಿಕವಾಗಿಯೂ ದುರ್ಬಲರಾಗಿರುತ್ತಾರೆ. ಆದಾಗ್ಯೂ ಶಾಲೆಯ ಪರಿಸರ ನೈಸರ್ಗಿಕವಾಗಿಯೇ ಹಚ್ಚ ಹಸಿರಾಗಿದ್ದು ಭೇಟಿ ನೀಡಿದವರೆಲ್ಲ 'ಶಾಂತಿ ನಿಕೇತನ ' ಎಂದು ಪ್ರಶಂಸಿಸಿದ್ದಾರೆ.

## 2. ಶಾಲೆಯಲ್ಲಿ ಕೈಗೊಂಡ ನಾವೀನ್ಯಯುತ ಚಟುವಟಿಕೆಗಳು.

ವಿದ್ಯಾರ್ಥಿಗಳಲ್ಲಿ ಆನಂದ ದಾಯಕ. ಅನುಭವಾತ್ಮಕ, ಸೃಜನಾತ್ಮಕ ಕಲಿಕೆ ಮೂಡಿಸಲು, "ವಿನೋದದೊಡನೆ ವಿಚಾರ " ತಿಳಿಸುವ ನೂತನ ಪ್ರಯತ್ನವನ್ನು ಶಾಲೆಯ ಶಿಕ್ಷಕರು ಸೃಷ್ಟಿಸಿದ್ದೇವೆ ಅದರ ತುಣುಕುಗಳು.

1. ಸುಮಾರು 70 ಕ್ಕೂ ಹೆಚ್ಚಿನ ಔಷಧಿ ಸಸ್ಯಗಳಿರುವ "ನೈಮಿಷ" ಎಂಬ ಧನ್ವಂತಂ ವನ, ಔಷಧಿ ಪರಿಚಯ ನೀಡುವ ಧನ್ವಂತಂ ಪರುಷ.
2. ಆಟದ ಮೂಲಕ ಏಕಕಾಲಕ್ಕೆ ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಲೇಖನ ಚಿಹ್ನೆ ಹಾಗೂ ಗಣಿತ ಕಲಿಯುವಂತೆ ಸಂಪಿಗೆ ಮರದ ಕೆಳಗೆ ಸೃಜಿಸಿರುವ ಕಲಿಕಾ ಕಟ್ಟೆ.
3. ಪರಿಸರ ನಾಶದ ಕುರಿತು ಸಂದೇಶ ನೀಡುವ ಶಾಸನದ ಪರಿಕಲ್ಪನೆ ಮೂಡಿಸುವ "ಮರಶಾಸನ ಅಮರಶಾಸನ"
4. ಶಾಲಾ ಹಾದಿಯಲ್ಲಿ ಸ್ವಾಗತ ಕೋರುವ ಧಾತುಗಳು ಹಾಗೂ ರಾಸಾಯನಿಕ ಸಂಕೇತಗಳ ಕಲಿಕಾ ಹಾದಿ.
5. ಇಂಗ್ಲೀಷ್, ಕನ್ನಡ, ಹಿಂದಿಯ ವ್ಯಾಕರಣಗಳ ಕಲಿಕೆ ಹಾಗೂ ಗ್ರಂಥಾಲಯ ಬಳಕೆಗೆ ಸುಸಜ್ಜಿತವಾದ ಶ್ರದ್ಧಾ ಕುಟೀರ.
6. ವೃತ್ತದ ಪರಿಕಲ್ಪನೆ ಮೂಡಿಸುವ ಗಂಗಾ ಚಿಲುಮೆ.
7. ಕನ್ನಡ, ಇಂಗ್ಲೀಷ್, ಹಿಂದಿಯಲ್ಲಿ ಹಣ್ಣುಗಳು, ಹೂವುಗಳು, ಪಕ್ಷಿಗಳು, ತರಕಾರಿಗಳ ಚಿತ್ರದೊಂದಿಗೆ ಆಡುವ "ಹೇಳು ನಾನಾರು " ಆಟದಿಂದ ಶೋಭಿಸುವ ಶಾಲಾ ಕೊಠಡಿಯ ಭಿತ್ತಿಗಳು.
8. ಮಕ್ಕಳ ಬೌದ್ಧಿಕ ಮಟ್ಟದ ಬೆಳವಣಿಗೆಗೆ ಸಹಾಯಕವಾಗಲು ರಸಪ್ರಶ್ನೆಯ ತೋರಣದೊಂದಿಗೆ ಶೋಭಿಸುವ ಕಲಿಕಾ ಸೂರು.
9. ಭಿನ್ನರಾಶಿ ಪರಿಕಲ್ಪನೆ ಮೂಡಿಸುವ ಕಲಿಕಾ
10. ಗಣಿತ ಸೂತ್ರಗಳ ಕಲಿಕೆಗಾಗಿ 'ಜಿಂಜಾ ನಿಂಜಾ ಆಟ'
11. ಆಕೃತಿಗಳ ಪರಿಕಲ್ಪನೆ ಮೂಡಿಸುವ ಆಕೃತಿ ಮನುಷ್ಯ
12. ವೃಕ್ಷೋ ರಕ್ಷತಿ ರಕ್ಷತಃ ಪೂರಕವಾಗಿ ಮರವೊಂದರ ಬಹುಪಯೋಗಿ ಚಿತ್ರ
13. ಪೌಷ್ಟಿಕ ಆಹಾರದ ಪೋಷಕಾಂಶಗಳು, ವಿಟಮಿನಿಗಳ ಕೊರತೆಯಿಂದ ಬರುವ ರೋಗಗಳ ಕಲಿಕಾ ಚಿತ್ರ.
14. ಹತ್ತೋಣ ಇಳಿಯೋಣ ಏರಿಕೆ–ಇಳಿಕೆ ಕಲಿಯೋಣ ಎಂಬ ಪರಿಕಲ್ಪನೆಯ ಏರಿಕೆ ಇಳಿಕೆ ಕಂಬಗಳು
15. ಕಲ್ಲುಗಳನ್ನು ನೆಲದಲ್ಲಿ ಕುಟ್ಟಿ ರಚಿಸಿದ ಆಂಗ್ಲ ವರ್ಣ ಮಾಲೆಯ ಅಕ್ಷರಗಳ ಸಹಾಯದಿಂದ ಪದರಚನಾ ಆಟ
16. ಗರಿಷ್ಟ, ಕನಿಷ್ಟ, ಮಧ್ಯ ಸಂಖ್ಯೆ ಗುರುತಿಸುವ ಕಲಿಕಾ ಕಂಬಗಳು
17. ಇಂಗ್ಲೀಷ್ ಕನ್ನಡ ಸಂಭಾಷಣೆಗಾಗಿ ಕಾನ್ವರ್ಸೇಷನ್ ಟೇಬಲ್
18. ಮ್ಯಾನುಯಲ್ ಕ್ಲಾಕ್ ಕಲಿಕಾ ಗಡಿಯಾರದ ಮೂಲಕ 'ಸಮಯ'ವನ್ನು ಸಮಯವಾಗಿ ಕಲಿಯುವ ಕಲಿಕಾ ಗಡಿಯಾರ.
19. ದಿಕ್ಕುಗಳ ಪರಿಕಲ್ಪನೆ ಮೂಡಿಸುವ ದಿಕ್ಸೂಚಿ.
20. ಮೇಲ್ ಫೀಮೇಲ್, ಯಂಗ್ ಓನ್ಸ್ ಕಲಿಕೆಗಾಗಿ ಕಲಿಕಾ ಕುರ್ಚಿ
21. ಕನ್ನಡ ಸಂಧಿಗಳ ಪರಿಚಯಿಸುವ ಕಲಿಕಾ ಪೇರಲಮರ.
22. ಚಲನೆಯ ವಿಧಗಳ ಪರಿಚಯಿಸುವ ಜೋಕಾಲಿ, ಸ್ಪಿಂಕ್ಲರ್.
23. ಏರಿಕೆ, ಇಳಿಕೆ ಕವಿ–ಕಾವ್ಯನಾಮ ಕಲಿಕ ಏತ ಬಾತ

24. ಪಾಠಕ್ಕನುಗುಣವಾಗಿ ಜೋಡಿಸಿದ ವಿಜ್ಞಾನ ಉಪಕರಣಗಳ ಟ್ರೇ ಹಾಗೂ ಒಪ್ಪವಾಗಿ ಜೋಡಿಸಿದ ಗ್ರಂಥಾಲಯ ಪುಸ್ತಕಗಳು, ಕಂಗೊಳಿಸುವ ಶೋಕೇಸ್.
25. ವಿದ್ಯಾರ್ಥಿಗಳಲ್ಲಿ ಬರವಣಿಗೆ ಉತ್ತೇಜಿಸುವ ಚಿಣ್ಣರ ಲೋಕ ಹಸ್ತ ಪ್ರತಿ.
26. ಬೆತ್ತ, ಕಲ್ಲು, ಚಂದನ, ಮರಗಳ ಹಳೆಯ ಕಾಲದ ವಿವಿಧ ಬುಟ್ಟಿ, ಗಡಿಗೆ, ಹಂಚು, ಕರಂಡಿಗೆ ಹಳಗುಣಿಮಣಿಗಳು ಹಾಗೂ ಐತಿಹಾಸಿಕ ವ್ಯಕ್ತಿಗಳಿಂದ ಕೂಡಿರುವ ಇತಿಹಾಸದ ಕೊಠಡಿ.
27. ಪರಿಸರ ಸ್ನೇಹಿ ಅಂಶಗಳಿಂದ ಶತ್ರು ಕಸ ಹಾಗೂ ಮಿತ್ರ ಕಸದ ಡಬ್ಬಗಳು, ಇಂಗುಗುಂಡಿ, ಹುತ್ತವನ್ನು ಸ್ವಾಭಾವಿಕ ಇಂಗುಗುಂಡಿಯಾಗಿಸಿರುವುದು, ನೀರಿನ ಮಿತಬಳಕೆಗೆ ಕ್ರಮ ಕೈಗೊಂಡಿರುವುದು.
28. ವಿದ್ಯಾರ್ಥಿಗಳಲ್ಲಿ ಧೈರ್ಯ, ಉತ್ಸಾಹಕತೆ ಸಾಹಸ ಪ್ರವೃತ್ತಿ ಉತ್ತೇಜಿಸುವ ನಾಟ್ ಮೂಲಕ ಮರ ಏರುವ ಹಗ್ಗದ ತೂಗು ಸೇತುವೆ, ಮೇಲೆ ನಡೆಯುವ ಮರ ಏರುವ ಹಗ್ಗದ ಏಣಿ, ಮರಗಾಲಿನ ನಡಿಗೆ, ಟೈರುಗಳಲ್ಲಿ ನೇತಾಡುವ ಟೈರಿನಿಂದ ಟೈರಿಗೆ ಜಿಗಿಯುವ ಕಂಬಗಳ ಉಯ್ಯಾಲೆ.
29. ಹಾಡುಗಳು ಹಾಗೂ ಕತೆಗಳ ಮೂಲಕ ಕಲಿಕಾಂಶ ಪರಿಚಯ, "ಜಿಲ್ಲಾ ಗೀತೆಗಳು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶ ಪರಿಚಯಿಸುವ ರಾಜ್ಯಗಳ ಗೀತೆ, ಗಣಿತ ಸೂತ್ರಗಳ ಕತೆ, ವಿದ್ಯಾರ್ಥಿಗಳನ್ನೇ ಪ್ರಾಣಿ–ಪಕ್ಷಿ–ಹೂಗಳಾಗಿ ಹೆಸರಿಸುವ ಖಜಜ ಜಚಿಥಿ, ಃಟಣಜ ಜಚಿಥಿ.
30. ಗಾಳಿ ಮೂಲಕ ಬಣ್ಣ ಪರಿಚಯಿಸುವ ವಿವಿಧ ಸೃಜನಾತ್ಮಕ ಕಲಿಕಾ ಚಟುವಟಿಕೆಗಳು, ಹೊಸ ಸುದ್ದಿ ಮನೆಮದ್ದು, ಸರ್ವಜ್ಞ ವಚನ, ರಸಪ್ರಶ್ನೆ, ಪುಸ್ತಕ ಪರಿಚಯ, ಒಳ್ಳೆಯ ಕೆಲಸ ಗೀತೆ ಟಿ.ಪಿ.ಆರ್. ಮುಂತಾದ ವಿನೂತನ ಅಂಶಗಳ ಪ್ರಾರ್ಥನೆ.

## 3. ಆರಂಭದಲ್ಲಿ ತಾವು ಎದುರಿಸಿದ: ಸಮಸ್ಯೆಗಳು/ಸವಾಲುಗಳು:

ಆರಂಭದಲ್ಲಿ ಪೋಷಕರ ಮನವೊಲಿಕೆ ಹಣಕಾಸು, ಸಂಪನ್ಮೂಲಗಳ ಕ್ರೋಢೀಕರಣ ಸಮಯದ ಹೊಂದಾಣಿಕೆ ಇಲಾಖೇತರ ಕೆಲಸಕಾರ್ಯಗಳು, ಶಿಕ್ಷಕರ ಕೊರತೆ ಶಾಲೆಯ ವಿಶಾಲ ಜಾಗದ ಸಮರ್ಪಕ ಬಳಕೆಯ ಸಮಸ್ಯೆ, ಸಸ್ಯಗಳ ರಕ್ಷಣೆಗೆ ಕಾಂಪೌಂಡ್ ಸಮಸ್ಯೆ ಶೌಚಾಲಯ ಶಿಥಲಿ ಹಾಗೂ ಕುಡಿವ ನೀರಿನ ಅಭಾವದಂತಹ ಸಮಸ್ಯೆಗಳಿದ್ದವು.

## 4. ಪರಿಹಾರಕ್ಕೆ ತಾವು ಕೈಗೊಂಡ ಕ್ರಮಗಳು:

* ಪೋಷಕರೊಂದಿಗೆ ಮಧುರ ಬಾಂಧವ್ಯ
* ಪೋಷಕರು ಊರ ಹಿರಿಯರನ್ನು ಒಳಗೊಂಡಂತೆ ವಿವಿಧ ಕಾರ್ಯಕ್ರಮಗಳನ್ನು
* ಆಯೋಜಿಸಿ ಶಾಲಾ ಚಟುವಟಿಕೆಗಳಲ್ಲಿ ಅವರನ್ನು ಭಾಗವಹಿಸುವಿಕೆಗೆ ಉತ್ತೇಜನೆ.
* ಸರ್ಕಾರದ ವಿವಿಧ ಇಲಾಖೆಗಳಿಗೆ ನೀರು ಹಾಗೂ ಕಾಂಪೌಂಡ್ ಕೊರತೆ ಗಮನಕ್ಕೆ ತಂದು ಜಿಲ್ಲಾ ಪಂಚಾಯತ್ ಹಾಗೂ ಗ್ರಾಮ ಪಂಚಾಯಿತಿಯ ಸಹಕಾರದಿಂದ ಇವುಗಳ ಪೂರೈಕೆ.
* ಶ್ರೀ ಶಕ್ತಿ ಹಾಗೂ ವಿವಿಧ ಸಂಘ ಸಂಸ್ಥೆಗಳೊಂದಿಗೆ ಉತ್ತಮ ಬಾಂಧವ್ಯ ಧರ್ಮಸ್ಥಳ ಸಂಘದಿಂದ ಶೌಚಾಲಯಕ್ಕೆ ಧನ ಸಹಾಯ. ಒಟ್ಟಿನಲ್ಲಿ ಸಮುದಾಯದೊಂದಿಗೆ ಸುಮಧುರ ಬಾಂಧವ್ಯ ನಮ್ಮೆಲ್ಲ ಸಮಸ್ಯೆಗಳಿಗೆ ಟಾನಿಕ್ಕು.

## 5. ದಾನಿಗಳು (ಶ್ರಮ, ಸಮಯ ಧನ, ಜ್ಞಾನ ನೀಡಿದವರು)

ಸೇಂಟ್ ಮೇರಿಸ್ ಕಾಲೇಜು, ಶಿರ್ವಾ ಇಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಶ್ರೀ ಶ್ರೀಧರಮೂರ್ತಿಕೆ.ಎಸ್. ಇವರು ತಮ್ಮ ಶ್ರಮ, ಸಮಯ, ಧನ ಜ್ಞಾನ ನೀಡಿ ಸೃಜನಶೀಲ ಸಹಕಾರ ನೀಡಿ ನಮ್ಮ ಶಿಕ್ಷಕರ ಪ್ರಯತ್ನಗಳಿಗೆ ಪ್ರೋತ್ಸಾಹಿಸುತ್ತಿದ್ದಾರೆ. ಶಾಲೆಗೆ ಸಹಕಾರ ನೀಡಿದವರ ವಿವರ ಬರೆಯ ಹೊರಟರೆ ಪುಟಗಳೇ ಸಾಲದು. ಪ್ರತಿ ವರ್ಷ ವಾರ್ಷಿಕೋತ್ಸವ, ವಸ್ತು ಪ್ರದರ್ಶನ, ವಿವಿದ ಕಾರ್ಯಕ್ರಮಗಳು, ಶಾಲೆಗೆ ಬನ್ನಿ ಶನಿವಾರ ಎಲ್ಲವು ದಾನಿಗಳ ನೆರವಿನಿಂದಲೇ ನಡೆಯುತ್ತಿರುವುದು. ಸಿಸ್ಕೊ, ಶ್ರೀಗಂಧ ಕನ್ನಡ ಸಂಘ ಉದ್ದಮಿಗಳಾದ ಸೈಮನ್ ಡಿಸೋಜ ಶಿರ್ವಾ ವತಾಳ ಸಹೋದರರು,ತೀರ್ಥಹಳ್ಳಿ, ಅನಂತರಾವ್ ಪದ್ಮನಾಭ ರಾವ್ ಕಡಸೂರು, ವೀರೇಶ್ ಹಾಲುವಳ್ಳಿ ರಾಮಚಂದ್ರ, ಜೋಯಿಸ್ ಸಂತೋಷ ಮಾಳೂರು, ಪೋಷಕರ ಉದಾರ ಧನ ಸಹಾಯ ಹೇಳಿಕೆಗೆ, ಮಾತಿಗೆ ನಿಲುಕದ್ದು. ಅದರಲ್ಲಿ ಶ್ರೀಗಂಧ ಕನ್ನಡ ಸಂಘ ಬೆಂಗಳೂರು ಇವರ 4 ಕಂಪ್ಯೂಟರ್ ಪ್ರಿಂಟರ್ ಸುಮಾರು

25,000/– ರೂಗಳು, ನೋಟ್‌ಬುಕ್ ಇತ್ಯಾದಿಗಳು, ಸಿಸ್ಕೊ ಕನ್ನಡ ಸಂಘ ಸುಮಾರು 2,50,000/– ಸಹಾಯ ನಮ್ಮ ಶಾಲೆಯ ಬಲವರ್ಧನೆಯ ಪ್ರಮುಖ ಅಂಶ.


### 6. ವಿಶೇಷತೆ:

* ಶಾಲಾ ವ್ಯಾಪ್ತಿಯಲ್ಲಿರುವ ಮಕ್ಕಳ ಸಂಖ್ಯೆ ಅತ್ಯಂತ ಕಡಿಮೆ ಆದರೆ ಶಾಲೆಯ ಭೌತಿಕ ಹಾಗೂ ಶೈಕ್ಷಣಿಕ ಗುಣಮಟ್ಟ ವಿದ್ಯಾರ್ಥಿಗಳ ಪ್ರತಿಭೆ ಗಮನಿಸಿ ಶಾಲೆಯಿಂದ ಸುಮಾರು 12ಕಿ.ಮೀ ದೂರದಿಂದ ಓಮಿನಿ, ಆಟೋಗಳ ಮೂಲಕ ಕಳುಹಿಸುತ್ತಿರುವುದು ಸಂತಸದ ಸಂಗತಿಯಾಗಿದೆ.

* ತಾಳಮದ್ದಲೆ, ಉಚಿತ ಆರೋಗ್ಯ ತಪಾಸಣೆ ಪರಿಸರ ಚಿಂತನೆಯಂತಹ ವಿವಿಧ ಕಾರ್ಯಗಾರಗಳ ಆಯೋಜನೆ ಮಾಡುವ ಮೂಲಕ ಸರ್ವೋತೋಮುಖ ಕಲಿಕೆಗೆ ದಾರಿಯಾಗಿದೆ.










ORANGE











